

ಎಡದಿಂದ ಬಲಕ್ಕೆ

1. ಪ್ರತಿಭಾವಂತರಿಗೆ ಅತ್ಯಂತ ಪ್ರಿಯ ಈ ಬೆಳಗು 3
3. ಜೊತೆಗಾರರ ಬಾಲ್ಯವನ್ನೆಲ್ಲ ಚೆನ್ನಾಗಿ ತಿಳಿದವ ಈತ 3
4. ಮರುಳು ಮಾಡುವಷ್ಟು ಸುಂದರ ಈ ಭಾರೀ ಮುಂಡಾಸು 3
6. ಯಾರಿಗೂ ಮಣಿಯದಿರುವಾತ ಆಕೆಯ ಗಂಡ 3
7. ಆತನ ಪರಮಾಪ್ತ ಗೆಳೆಯ 'ಲಕ್ಷ್ಮಿಯ ಗಂಡ' 4
9. ಆಕೆ ಆ ಸ್ಥಳದಲ್ಲೇ ಸಿಕ್ಕಿದ್ದು ಯೋಗಾಯೋಗ ಅಷ್ಟೆ 4
11. ಭಾರೀ ಗಿಡುಗನನ್ನು ತೋರಿಸು ; ಕಂಪಿಸುವಂತೆ ಮಾಡು 4
13. ಕೆಟ್ಟ ಮುನಿಸನ್ನು ತೋರದವರಿಗೆ ಮಾತ್ರ ವಂದನೆ 4
15. ನಾರಿಯರಿಗೆ ತಕ್ಕ ಅಧ್ಯಾಪಕ ಈ ನಾಟ್ಯಗಾರ 3
17. ಕರಟಗಳನ್ನೇ ಜೋಡಿಸಿ ನಿರ್ಮಿಸಿರುವ ಕಲಾತ್ಮಕ ಮಕುಟ 3
18. ಪರಚಲು ಬಂದ ಮಂಗಕ್ಕೂ ಸಿಕ್ಕಿತು ಪ್ರಸಾದದ ತಿನಿಸು 3
19. ಗಡಿಗೆಯಲ್ಲಿಟ್ಟ ನೀರನ್ನು ಕುಡಿದವರಿಗೆಲ್ಲ ಮೂಗು ಸೋರುವ ಸೋಂಕು 3

ಮೇಲಿಂದ ಕೆಳಕ್ಕೆ

1. ವ್ಯಾಪಾರಕ್ಕೆಂದು ಬಂದವರೆಲ್ಲ ಒದಗಿಸಲೇಬೇಕು ಕುಲ ಗೋತ್ರ ವಿವರ 3
2. ತಣ್ಣೀರೆಂದರೇ ನಡುಗುತ್ತಾನೆ, ಇವನೆಂಥ ಯುವಕ ? 3
3. ಬಾಳಿನ ಪುಟವನ್ನೇ ಬದಲಿಸೀತು ಈ ಬರೆಯುವ ವಸ್ತು 3
5. ಲಾಭದಾಯಕ ಕೆಲಸದಲ್ಲಿದ್ದಾನೆ, ಆದರೆ ಭಾರೀ ಜಿಪುಣ 3
7. ನ್ಯಾಯಕ್ಕೆ ಅನುಸಾರವಾಗಿ ಹಂಚಿದ್ದು ಬಾಳೆ ಬೆಲ್ಲ ಮಿಶ್ರಣ 4
8. ಗುರುತಿಸಲು ಕೊಟ್ಟ ವಸ್ತುವನ್ನು ಸುತ್ತಿಸಿ ನೋಡು 4
9. ಎಲ್ಲರೂ ಪಲಾಯನ ಮಾಡುವಂತಿತ್ತು ಆಕೆಯ ರಾಗ ಪ್ರಸ್ತಾರ 4
10. ಅವಕಾಶ ಕೊಟ್ಟವರ ಪರಿಸ್ಥಿತಿಯೇ ಸುಲಭವಿಲ್ಲದ್ದಾಯಿತು 4
12. ಗೊಲಕ ತೆರೆದು ತಂದದ್ದು ಈ ಮಕ್ಕಳಾಟಿಕೆ 3
14. ಎಲ್ಲರನ್ನೂ ಮೂಲೆ ಗುಂಪು ಮಾಡುವಷ್ಟಿದೆ ಆಕೆಯ ಸೊಕ್ಕು 3
15. ನಾಟ್ಯವನ್ನೆಲ್ಲ ಕೈಬಿಟ್ಟು ಬರೀ ಅಭಿನಯ ಮಾಡಿದರಲ್ಲ! 3
16. ಡಿಚ್ಚಿ ಹಾಕಿ ಗೆದ್ದು ಬಂದವನಿಗೆ ಇದೇನು ತಿಂಡಿ ? 3

---

### 23–12–2021 ಉತ್ತರಗಳು

ಎಡದಿಂದ ಬಲಕ್ಕೆ

1. ಅಲಂಕಾರ, 3. ವಿರೋಧ, 4. ಕ್ಷಿತಿಜ, 6. ಮದರಾಸು, 7. ನೀರಾವರಿ, 8. ಅನಿಯತ, 10. ಕೆಟ್ಟಜನ, 12. ಪಿಚಕಾರಿ, 14. ಹಾಳುಭಾವಿ, 16. ನಲಿವು, 17. ವಾರಿಜ, 18. ಗೆಜ್ಜೆನಾದ.

ಮೇಲಿನಿಂದ ಕೆಳಕ್ಕೆ

1. ಅಧಮ, 2. ರಕ್ಷಿಸು, 3. ವಿಧಿವಶ, 5. ಜನನಿ, 7. ನೀರಡಿಕೆ, 9. ತರಕಾರಿ, 11. ಜವಾನ, 13. ಪಂಚಭುಜ, 14. ಹಾವುಗೆ, 15. ವಿವಾದ.

**ಪ್ರಶ್ನಾಂಕಣ**

## ಕಣಜ ಮತ್ತು ಜೇನ್ನೊಣ : ಏನು ಅಂತರ ?

ಜೇನ್ನೊಣ (ಚಿತ್ರ1) ಮತ್ತು ಕಣಜ (ಚಿತ್ರ2) ಎರಡೂ ಕೀಟ ವರ್ಗಕ್ಕೇ ಸೇರಿವೆ; ಎರಡೂ ಉಪಯುಕ್ತ, ಸಸ್ಯ ಮಿತ್ರ ಕೀಟಗಳೇ ಆಗಿವೆ; ಉಗ್ರ ಧಾಳಿಗೆ ಮತ್ತು ಯಾತನಾಮಯ ಕುಟುಕಿಗೆ ಪ್ರಸಿದ್ಧವಾಗಿವೆ. ಆದರೂ ಅವುಗಳ ನಡುವೆ ಹಲವಾರು ಅಂತರಗಳಿವೆ.

ಇವೆರಡು ಬಗೆಯ ಕೀಟಗಳೂ ಪುಟ್ಟ ಗಾತ್ರದವೇ ಆದರೂ ಜೇನ್ನೊಣಗಳದು ಕಣಜಗಳಿಗಿಂತ ಚಿಕ್ಕ ಗಾತ್ರ. ಎರಡೂ ಹಳದಿ ಮತ್ತು ಕಪ್ಪು ಬಣ್ಣದ ಪಟ್ಟೆಗಳ ಶರೀರವನ್ನೇ ಪಡೆದಿವೆ. ಜೇನ್ನೊಣಗಳದು ರೋಮ ಭರಿತ ಮೈ; ಕಣಜಗಳದು ನಯವಾದ




ಚರ್ಮದ, ಹೊಳಪಿನ ಪಟ್ಟೆ ಪಟ್ಟೆ ಶರೀರ. ಜೇನ್ನೊಣಗಳಲ್ಲಿ 20,000 ಪ್ರಭೇದಗಳಿವೆ; ಕಣಜಗಳದು 30,000 ಪ್ರಭೇದಗಳು.

ಜೇನ್ನೊಣಗಳು ಪರಾಗಸ್ಪರ್ಶಿಸುವ ಜೀವಿಗಳು. ಅವು ಹೂವುಗಳ ಪರಾಗ ಮತ್ತು ಮಕರಂದವನ್ನು ಸಂಗ್ರಹಿಸಿ, 'ಜೇನು ಹುಟ್ಟು'ಗಳಲ್ಲಿ ಶೇಖರಿಸಿ, ಜೇನು ತುಪ್ಪವನ್ನಾಗಿ ಪರಿವರ್ತಿಸಿ ಸೇವಿಸುತ್ತವೆ; ಅದೊಂದೇ ಅವುಗಳ ಆಹಾರ. ಕಣಜಗಳು ಸಸ್ಯಗಳ ಪಿಡುಗುಕಾರಕ ಕೀಟಗಳನ್ನು ಬೇಟೆಯಾಡಿ ತಿನ್ನುತ್ತವೆ; ಅವು ಕಟ್ಟಾ ಮಾಂಸಾಹಾರಿಗಳು.

ಜೇನ್ನೊಣಗಳು ವರ್ಷವಿಡೀ ಕ್ರಿಯಾಶೀಲವಾಗಿರುತ್ತವೆ. ಅವುಗಳ ಪ್ರತಿ ಕುಟುಂಬದಲ್ಲೂ ರಾಣಿಯೊಂದರ ನೇತೃತ್ವದಲ್ಲಿ 75,000 ಸಂಖ್ಯೆಯಷ್ಟು ಕೆಲಸಗಾರರಿರುತ್ತಾರೆ. ಕಣಜಗಳ ಪ್ರತಿ ಕುಟುಂಬದ ಜನಸಂಖ್ಯೆ 10,000 ಕ್ಕಿಂತ ಕಡಿಮೆ. ಕಣಜಗಳು ಪ್ರತಿ ಚಳಿಗಾಲವನ್ನೂ ಇದ್ದಲ್ಲೇ ಅಡಗಿ ನಿದ್ರೆಯಲ್ಲೇ ಕಳೆಯುತ್ತವೆ.

ಜೇನ್ನೊಣಗಳು ಕೆಣಕಿದವರ ಮೇಲೆ ದಾಳಿಗಿಳಿಯುತ್ತವೆ. ಪ್ರತಿ ಜೇನ್ನೊಣಕ್ಕೂ ತನ್ನ ಶರೀರದ ಹಿಂಬದಿಯ ಮುಳ್ಳಿನಿಂದ ಒಮ್ಮೆ ಮಾತ್ರ ಕುಟುಕುವ ಶಕ್ತಿ ಇದೆ. ಕುಟುಕಿದ ನಂತರ ಮುಳ್ಳು ಜೇನ್ನೊಣದ ಕೆಲ ಒಳ ಅಂಗಗಳ ಸಮೇತ ಕಿತ್ತು ಹೊರ ಬರುತ್ತದೆ; ಜೇನ್ನೊಣ ಸಾಯುತ್ತದೆ. ಕಣಜಗಳು ಹಾಗಲ್ಲ. ಸಂಶಯ ಬಂದವರ ಮೇಲೆಲ್ಲ ಅವು ಹಾರಿ ಕುಟುಕುತ್ತವೆ. ಕುಟುಕಿದ ಮೇಲೂ ಕಣಜದ ಮುಳ್ಳು ಭದ್ರವಾಗಿ ಉಳಿದು ಮತ್ತೆ ಮತ್ತೆ ಕುಟುಕುವ ಸಾಮರ್ಥ್ಯ ಪಡೆದಿದೆ.

ಇಲ್ಲೊಂದು ವಿಶೇಷ: ಕಣಜ ಮತ್ತು ಜೇನ್ನೊಣ ಅಷ್ಟಷ್ಟೂ ಪ್ರಭೇದಗಳಲ್ಲಿ ಸಾವಿರಾರು ಪ್ರಭೇದಗಳು ಸಂಪೂರ್ಣ ಒಂಟಿ ಜೀವನ ನಡೆಸುತ್ತವೆ; ಹೇರಳ ಪ್ರಭೇದಗಳು ಯಾರನ್ನೂ ಕುಟುಕುವುದೂ ಇಲ್ಲ. ಈ ಎರಡೂ ಬಗೆಯ ಕೀಟಗಳ ಕೆಲಸಗಾರರದಂತೂ ಕೆಲವೇ ವಾರಗಳ ಆಯುಷ್ಯ; ರಾಣಿಯರು ಮಾತ್ರ ಒಂದೆರಡು ವರ್ಷ ಕಾಲ ಬದುಕಿರುತ್ತವೆ.

■ ಎನ್. ವಾಸುದೇವ್